# ಪ್ರತಿಭಟನೆ ಹಕ್ಕುಂಟು, ಷರತ್ತು ಅನ್ವಯ

ಉವಾ 14/2/21

• ಸುಪ್ರೀಂನಿಂದ ಪ್ರತಿಪಾದನೆ

• ಎಲ್ಲೆಡೆ ಒಂದೇ ರೀತಿ ಅನ್ವಯ ಆಗಲ್ಲ

ನವದೆಹಲಿ: ಪ್ರತಿಭಟನೆ ಹಕ್ಕು ಎಲ್ಲೆಡೆ, ಒಂದೇ ರೀತಿ ಅನ್ವಯವಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

ಸಿಎಎ ವಿರೋಧಿಸಿ ಶಹೀನ್ ಭಾಗ್ ಪ್ರತಿಭಟನೆ ಕುರಿತ ಸುಪ್ರೀಂಕೋರ್ಟ್ ತೀರ್ಪನ್ನು ಮರುಪರಿಶೀಲಿಸಬೇಕು ಎಂಬ ಅರ್ಜಿಯನ್ನು ತಿರಸ್ಕರಿಸಿದ ಸುಪ್ರೀಂಕೋರ್ಟ್, ಪ್ರತಿಭಟನೆ ಹಕ್ಕಿದೆ ಎಂಬ ಕಾರಣಕ್ಕಾಗಿ ಸಾರ್ವಜನಿಕ ಸ್ಥಳವನ್ನು ಸುದೀರ್ಘ ಕಾಲ ಹಿಡಿದಿಡಲು ಸಾಧ್ಯವಿಲ್ಲ ಎಂದಿತು.

ನ್ಯಾಯಮೂರ್ತಿಗಳಾದ ಸಂಜಯ್ ಕೌಶಲ್ ಕೌಲ್, ಅನಿರುದ್ಧ ಬೋಸ್ ಮತ್ತು ಕೃಷ್ಣ ಮುರಾರಿ ಅವರಿದ್ದ ತ್ರಿಸದಸ್ಯ ಪೀಠ, ಈ ಬಗ್ಗೆ ವಿಚಾರಣೆ ನಡೆಸಿದ್ದು, ಪ್ರತಿಭಟನೆ ಹಕ್ಕಿನ ಬಗ್ಗೆ ಕೋರ್ಟ್‌ನ ಹಿಂದಿನ ತೀರ್ಪುಗಳು ಮತ್ತು ಅಭಿಪ್ರಾಯಗಳ ಬಗ್ಗೆ ಗಮನ ಹರಿಸಿದ್ದೇವೆ. ಭಿನ್ನತೆಗೋಸ್ಕರ ಪ್ರತಿಭಟನೆಯ ಹಕ್ಕು ಇದೆ ಎಂಬುದನ್ನು ಒಪ್ಪಿಕೊಳ್ಳಬಹುದಾದರೂ, ಕೆಲವೊಂದು ಕರ್ತವ್ಯಗಳ ಹಿಡಿತಕ್ಕೆ ಒಳಪಟ್ಟಿದೆ ಎಂಬುದನ್ನೂ ಮರೆಯಬಾರದು ಎಂದಿತು.

ಪ್ರತಿಭಟನೆಯ ಹಕ್ಕು ಎಲ್ಲಾ ಸಮಯದಲ್ಲೂ, ಎಲ್ಲೆಡೆಯಲ್ಲೂ ಒಂದೇ ರೀತಿ ಅನ್ವಯವಾಗುವುದಿಲ್ಲ, ಅದು ಎಂಥದ್ದೇ ಪ್ರತಿಭಟನೆಯಾಗಲಿ, ಸುದೀರ್ಘ ಅವಧಿಯಲ್ಲಿ ಸಾರ್ವಜನಿಕ ಸ್ಥಳಗಳನ್ನು ಆಕ್ರಮಿಸಿಕೊಳ್ಳುವಂತಿಲ್ಲ. ಏಕೆಂದರೆ, ಇವರಿಂದ ಬೇರೆಯವರ ಹಕ್ಕುಗಳಿಗೆ ತೊಂದರೆ ನೀಡಿದಂತೆ ಆಗುತ್ತದೆ ಎಂದು ಹೇಳಿತು.